ಆ ಕಡೆ ಏನೇನೋ ಯೋಚಿಸುತ್ತಿದ್ದಳು. 'ಎಷ್ಟೇ ಆಗಲಿ ಕಲಿತ ನಾವು ಕಲಿಯದೇ ಬಿಡುವುದೇ ಹೆಚ್ಚು ಇರುತ್ತದೆ. ಮುಟ್ಟದೆ ಮಲಗದೆ ಮೂಸದೆ ಹುಟ್ಟು ಪಡೆಯದ ಕನಸುಗಳು ಇಲ್ಲೆಲ್ಲ ಛಿದ್ರವಾಗಿ ಕಾಲಿಗೆ ಚುಚ್ಚಿ ರಕ್ತ ಹರಿಸುತ್ತಿರುತ್ತವೆ ಎಂಬುದನ್ನು ನೀವು ಕಾಣದೆಯೇ ನಿಮ್ಮ ನೇರಕ್ಕೆ ಎಲ್ಲರ ಬದುಕನ್ನು ತೂಗಿ ಅಳತೆ ಮಾಡುತ್ತೀರಿ ವಿವೇಕ್. ನನಗೆ ಬೇಸರವಾಗುತ್ತಿದೆ. ಹಾಸ್ಟೆಲಿಗೆ ಹೋಗಬೇಕು' ಎಂದು ಅಸಹನೆ ತೋರಿದಳು. ಇವನೊಡನೆ ಈ ದಿನ ಇದ್ದು ತಾನು ಕೂಡ ಒಂದು ನಿರ್ಣಯಕ್ಕೆ ಬರಬೇಕು ಎಂದುಕೊಂಡಿದ್ದವಳು ಯಾಕೋ ಯಾವುದೂ ಈಗ ಬೇಡ ಎಂದು ತನ್ನೊಳಗಿನ ವ್ಯಥೆಯನ್ನು ಕೊನೆಗೂ ಯಾರ ಎದಿರೂ ಹಾಕಲಾರದೆ ಊರಿಗೆ ಈ ಸಂಜೆಯೇ ಹೊರಡುವುದು ಸರಿ ಎಂದು ನಿರ್ಧರಿಸಿಕೊಂಡಳು.

ಇವನಿಗೆ ತಣ್ಣಗೆ ಕೊರೆಯುವ ಮೌನ ಈಗ ಬೇಕಾಗಿತ್ತಾದರೂ ತಡೆಯದ ವ್ಯಥೆ ಮಾತಾಗಿ 'ನನಗೆ ರೆಕ್ಕೆ ಇದ್ದರೆ ಪುಕ್ಕ ಇರುವುದಿಲ್ಲ, ರೆಪ್ಪೆಗಳಿದ್ದರೆ ಕಣ್ಣು ಇರುವುದಿಲ್ಲ, ಮಾತುಗಳಿದ್ದರೆ ಬಾಯಿ ಇರುವುದಿಲ್ಲ; ಎಂಥ ವಿಚಿತ್ರ ಸ್ಥಿತಿ ಅಲ್ಲವಾ? ನನ್ನ ಜೊತೆಯೇ ಇವೆಲ್ಲವೂ ಇದ್ದರೂ ಕೊನೆಗೆ ಅವು ಒಂದಕ್ಕೊಂದು ಬಂಧಿಸಿಕೊಳ್ಳೋದೆ ಇಲ್ಲ. ಯಾರನ್ನು ತಪ್ಪು ಅಂತಾ ಕರೆಯೋದು. ಹೋಗಲಿ ಬಿಡಿ, ಯಾವತ್ತಾದರೂ. ನೀವಾದರೂ ನನ್ನನ್ನು ಪ್ರೀತಿಸುತ್ತೀರಿ ಅಲ್ಲವಾ?' ಎಂದು ಹೇಳಬೇಕೆಂದರೂ ಬಾಯಿಕಟ್ಟಿದಂತಾಗಿ ಹೇಳದೇ ಹೋದ. ಇಬ್ಬರೊಳಗೂ ಇಬ್ಬರೂ ಇದ್ದರೂ ದೂರ ದೂರವೇ ಜಾರುವ ಕ್ರಿಯೆಯಲ್ಲಿ ಕಾಲ ಮತ್ತು ದುಃಖ ಸಮಾನಾಂತರವಾಗಿ ಅವರಿಬ್ಬರನ್ನು ಹಿಡಿದು ನಲಿಯುತ್ತಿತ್ತು. ಇಬ್ಬರೂ ಎದ್ದು ನಿಂತರು. 'ಪ್ರೇಮದಲ್ಲಿ ಯಾರು ಯಾರಿಗೂ ಸೋಲಬಾರದು ಅಲ್ಲವಾ?' ಎಂದು ಸಣ್ಣ ಹುಡುಗರ ಹಾಗೆ ಶಾಲೆಯಲ್ಲಿ ತಮ್ಮ ಮೇಡಂ ಎದಿರು ಕೇಳುವ ಹಾಗೆ ಹೇಳಿದ. ಆಕೆ ಮಾತನಾಡಬೇಕೆಂಬ ಆ ಶಕ್ತಿಯಿಲ್ಲದಿದ್ದರೂ ನಿರಾಳವಾದ ಸ್ವರದಲ್ಲಿ ಆದರೆ ಅದೊಂದು ಬಗೆಯ ದುಃಖವನ್ನು ಪಳಗಿಸಿದ ಧ್ವನಿಯಲ್ಲಿ, 'ಇಂಥಲ್ಲೆಲ್ಲ ಸೋಲು ಗೆಲುವು ಬರೋದೆ ಇಲ್ಲ. ಪ್ರೇಮದ ಹೆಸರಾಗಿ ಹೆಣ್ಣು ಗಂಡು ಸೋಲು ಗೆಲುವು ಪಡೆಯುತ್ತಾರೆ ಅನ್ನೋದಾಗಿದ್ದರೆ ಮನುಷ್ಯನ ಅಸ್ತಿತ್ವ ಇರುತ್ತಿರಲಿಲ್ಲ. ಆದರೆ ಎರಡು ಭಿನ್ನ ಅಸ್ತಿತ್ವಗಳು ಒಂದೇ ಸ್ಥಿತಿಯಾಗಿ ಬದುಕುವ ಹೊತ್ತಲ್ಲ. ನಾವು ನಾವಾಗಿರದೆ ನಮ್ಮ ಕ್ಷುದ್ರತೆಗಳಲ್ಲಿ ಕಳೆದು ಹೋಗಿರುತ್ತವೆ' ಎಂದಳು. ಇವನಿಗೆ ಇನ್ನು ಮಾತನಾಡಬೇಕೆನಿಸಲಿಲ್ಲ, ತಾನು ನಿಮ್ಮನ್ನು ಮದುವೆ ಆಗುತ್ತೀರಾ ಎಂದು ಕೇಳಬೇಕು ಎಂದು ಈ ದಿನ ಇರಿ ಎಂದು ಒತ್ತಾಯಿಸಿದ್ದೆ ಎಂದು ಈಗಲಾದರೂ ಹೇಳಬೇಕು ಅಂತಾ ಒತ್ತಡ ಬರದೇ ಹೋಯಿತು.

ಮನಸ್ಸಿನ ಆಳದಲ್ಲಿ ಯಾರೋ ಮಣ್ಣನ್ನು ತುಳಿದು ತುಳಿದು ಹದ ಮಾಡುತ್ತಿದ್ದಾರೆ ಎನಿಸಿದಂತಾಗಿ ಅವ್ಯಕ್ತ ಸಂಕಟ ನುಗ್ಗಿ ಗಂಟಲು ಬಿಗಿಯಾಗಿ ತಡೆದುಕೊಳ್ಳುತ್ತ ತನ್ನ ಅಸ್ತಿತ್ವದ ಆಚೆಗೆ ಹೋಗಿ ಬದುಕನ್ನು ಕೂಗಿ ಕರೆಯಬೇಕು ಎಂದುಕೊಂಡ. ತಾನು ಈ ಸಂಜೆಯೇ ಊರಿಗೆ ಹೋಗುತ್ತೇನೆ ಎಂದು ರಾಜಿ ನಿಧಾನಕ್ಕೆ ಹಾಸ್ಟೆಲ್ ಕಡೆ ಹೆಜ್ಜೆ ಇಟ್ಟಳು. ಇವನು ಉರಿವ ಬಿಸಿಲಿಂದ ಕಾದ ಡಾಂಬರು ರಸ್ತೆಯಂಚಿನ ಮರದ ಕೆಳಗೆ ಹಾಗೇ ನಿಂತು 'ಹೋಗಿಬಾ' ಎಂಬಂತೆ ರಾಜಿಗೆ ಮುಖವಿಟ್ಟ. ರಾಜಿ ಹೊರಟುಹೋದ ಮೇಲೂ ಅಲ್ಲೇ ನಿಂತಿದ್ದರೂ ಆ ನಡುವೆಯೂ ಅಲ್ಲಿ ನಡೆದಾಡುತ್ತಿದ್ದ ಹಾಸ್ಟೆಲಿನ ಹುಡುಗಿಯರು ಊರಿಗೆ ಹೊರಡುವ ಅನಿವಾರ್ಯತೆಯ ಗರಬಡಿದು ಅವರನ್ನು ತನ್ನ ಮನಸ್ಸಿನ ಒಳಕ್ಕೆ ತನ್ನ ಸುಖದ ಒಳಕ್ಕೆ ತುಂಬಿಕೊಳ್ಳಬೇಕೆಂದು ಹಾಗೆ ಮಾಡುತ್ತಾ ಯೋಚಿಸುತ್ತಾ ನಿಂತ.